Received on 18/3/2021
WUP.

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: 2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ವೆಚ್ಚ, ದೂರವಾಣಿ ವೆಚ್ಚಕ್ಕಾಗಿ ಮತ್ತು ಪ್ರಯಾಣ ಭತ್ಯೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:1.ಸರ್ಕಾರದ ಆದೇಶ ಸಂಖ್ಯೆ:ಇಡಿ/11/ಹೆಚ್‌ಪಿಸಿ/2020, ದಿ:03.04.2020 ಮತ್ತು ದಿ:30.04.2020

2.ಸರ್ಕಾರದ ಆದೇಶ ಸಂಖ್ಯೆ:ಇಡಿ/85/ಹೆಚ್‌ಪಿಸಿ/2020,ದಿ:05.06.2020, ದಿ:03.07.2020, ದಿ:01.10.2020 ಮತ್ತು ದಿ:20.01.2021

3.ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾಶಿಇ/ಪ್ರಾಕಬೆಂ/ಅವಿ-2/ಪ್ರಭಬಿ/ಅನುದಾನ ಕೋರಿಕೆ/2009-10, ದಿ:03.11.2020

4.ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಅನುದಾನ ಕೋರಿ ಸ್ವೀಕೃತವಾಗಿರುವ ಪ್ರಸ್ತಾವನೆಗಳು.

* * * * * *

**ಪ್ರಸ್ತಾವನೆ:**

2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ "ಇತರೆ ಸರ್ಕಾರಿ ಕಾಲೇಜುಗಳು" ಅಡಿಯಲ್ಲಿ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (041) ರಲ್ಲಿ ಪ್ರಯಾಣ ಭತ್ಯೆಗಾಗಿ ರೂ.2.00 ಲಕ್ಷಗಳು, (051) ರಲ್ಲಿ ಕಛೇರಿ ವೆಚ್ಚ ಹಾಗೂ ಇತರೆ ವೆಚ್ಚಗಳಿಗಾಗಿ ರೂ.500.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಇದರಲ್ಲಿ ರೂ.332.97 ಲಕ್ಷಗಳು, ಹಾಗೂ ಉಪಲೆಕ್ಕಶೀರ್ಷಿಕೆ (052) ರಲ್ಲಿ ದೂರವಾಣಿ ವೆಚ್ಚಕ್ಕಾಗಿ ರೂ.5.00 ಲಕ್ಷಗಳ ಅನುದಾನವನ್ನು ಒದಗಿಸಿ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಅನುದಾನದಲ್ಲಿ ಸ್ವೀಕೃತವಾಗಿರುವ ಪ್ರಸ್ತಾವನೆಗಳ ಮೇರೆಗೆ "ಇತರೆ ಸರ್ಕಾರಿ ಕಾಲೇಜುಗಳು" ಅಡಿಯಲ್ಲಿ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (041) ರಲ್ಲಿ ರೂ.35,000.00 ಗಳನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ವರ್ಗದ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆಗಾಗಿ ಆಯಾ ಜಂಟಿ ನಿರ್ದೇಶಕರುಗಳಿಗೆ, ಉಪಲೆಕ್ಕಶೀರ್ಷಿಕೆ (051) ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಾಂತಿನಗರ, ಬೆಂಗಳೂರು ಕಾಲೇಜಿನ ಕಛೇರಿ ವೆಚ್ಚಕ್ಕಾಗಿ ರೂ.4,240.00 ಗಳು ಹಾಗೂ ಉಪ ಲೆಕ್ಕಶೀರ್ಷಿಕೆ (052) ರಡಿಯಲ್ಲಿ 16 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ದೂರವಾಣಿ ವೆಚ್ಚಕ್ಕಾಗಿ ರೂ.90,000.00 ಗಳ ಅನುದಾನವನ್ನು ಬಿಡುಗಡೆ ಮಾಡಲು ಈ ಆದೇಶ.

## ಆದೇಶ ಸಂಖ್ಯೆ:ಕಾಶಿಇ:03:ಯೋಜನೆ:ಅ.ಬಿ:2020-21 ದಿನಾಂಕ:18.03.2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, "ಇತರೆ ಸರ್ಕಾರಿ ಕಾಲೇಜುಗಳು" ಅಡಿಯಲ್ಲಿ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (041) ರಲ್ಲಿ ರೂ.35,000.00 ಗಳನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ವರ್ಗದ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆಗಾಗಿ ಆಯಾ ಜಂಟಿ ನಿರ್ದೇಶಕರುಗಳಿಗೆ ಅನುಬಂಧ-1ರಲ್ಲಿ, ಉಪಲೆಕ್ಕಶೀರ್ಷಿಕೆ (051) ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಾಂತಿನಗರ, ಬೆಂಗಳೂರು ಕಾಲೇಜಿನ ಕಛೇರಿ ವೆಚ್ಚಕ್ಕಾಗಿ ರೂ.4,240.00 ಗಳು ಹಾಗೂ ಉಪ ಲೆಕ್ಕಶೀರ್ಷಿಕೆ (052) ರಡಿಯಲ್ಲಿ 16 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ದೂರವಾಣಿ ವೆಚ್ಚಕ್ಕಾಗಿ ರೂ.90,000.00 ಗಳನ್ನು ಅನುಬಂಧ-2ರಲ್ಲಿ ತಿಳಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಹೆಸರಿನ ಮುಂದೆ ನಮೂದಿಸಲಾದ ಅನುದಾನವನ್ನು ಆಯಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲಾಗಿದ್ದು ಸದರಿ ಅನುದಾನವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

ಅನುದಾನವನ್ನು ಬಳಸಿಕೊಳ್ಳುವಾಗ ಈ ಕೆಳಕಂಡ ಷರತ್ತುಗಳನ್ನು ಪಾಲಿಸುವಂತೆ ಕಟ್ಟುನಿಟ್ಟಾಗಿ ತಿಳಿಸಲಾಗಿದೆ.

1. ಅನುದಾನವನ್ನು ಪ್ರಧಾನ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (041) ರಲ್ಲಿ ಪ್ರಯಾಣ ಭತ್ಯೆಗಾಗಿ, (051) ರಲ್ಲಿ ಕಛೇರಿ ವೆಚ್ಚಕ್ಕಾಗಿ ಮತ್ತು ಉಪಲೆಕ್ಕಶೀರ್ಷಿಕೆ (052) ರಲ್ಲಿ ದೂರವಾಣಿ ವೆಚ್ಚಕ್ಕಾಗಿ ಈ ಲೆಕ್ಕಶೀರ್ಷಿಕೆಯಡಿಯಲ್ಲಿಯೇ ಭರಿಸತಕ್ಕದ್ದು.
2. ಅನುದಾನವನ್ನು ಕೂಡಲೇ ಬಳಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಕಳುಹಿಸತಕ್ಕದ್ದು.
3. ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು.

--2

4. ಅನುದಾನವನ್ನು ವಿನಿಯೋಗಿಸಿಕೊಳ್ಳುವಾಗ ಆರ್ಥಿಕ ನಿಯಮ, ಸರ್ಕಾರಿ ಆದೇಶ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ಹಾಗೂ ಅದರಡಿಯಲ್ಲಿನ ನಿಯಮಗಳನ್ನು ತಪ್ಪದೇ ಪಾಲಿಸುವುದು.
5. ವೆಚ್ಚ ಭರಿಸುವಾಗ ಡಿ.ಸಿ.ಬಿಲ್ಲುಗಳ ಮೇಲೆ ಸಂಬಂಧಿಸಿದ ಪ್ರಧಾನ ಮತ್ತು ಅದಕ್ಕೆ ಸಂಬಂಧಿಸಿದ ಉಪ ಲೆಕ್ಕಶೀರ್ಷಿಕೆಗಳನ್ನು ಗಮನವಿಟ್ಟು ನಮೂದಿಸತಕ್ಕದ್ದು.
6. ಕೇಂದ್ರ ಕಛೇರಿಯಿಂದ ಬಿಡುಗಡೆಯಾದ ಅನುದಾನದಲ್ಲಿ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವಾಗ K-2ರಡಿ ಆಯಾ ಉಪಶೀರ್ಷಿಕೆಗಳಲ್ಲಿ ಅನುದಾನ ಬಂದಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಬಿಲ್ಲನ್ನು ಖಜಾನೆಗೆ ಸಲ್ಲಿಸತಕ್ಕದ್ದು. ಅನುದಾನ ಲಭ್ಯತೆ ಕಂಡು ಬಾರದೆ ಇದ್ದಲ್ಲಿ ತಕ್ಷಣ ಕೇಂದ್ರ ಕಛೇರಿಯ ಯೋಜನೆ ವಿಭಾಗಕ್ಕೆ ಪತ್ರ ಮುಖೇನ ತಿಳಿಸಲು ಸಹ ಸೂಚಿಸಲಾಗಿದೆ.
7. ಹೊಸದಾಗಿ ಪ್ರಾರಂಭಿಸಲ್ಪಟ್ಟ <u>ಶಾಂತಿನಗರ</u> ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಡಿ.ಡಿ.ಓ ಕೋಡ್ ಮಂಜೂರಾಗದಿರುವುದರಿಂದ ಅನುದಾನವನ್ನು ಪ್ರಾಂಶುಪಾಲರು, ಸರ್ಕಾರಿ ಕಲಾ ಕಾಲೇಜು, <u>ಬೆಂಗಳೂರು</u> ಕಾಲೇಜಿನ ಕೆ2 ಕೋಡ್‌ಗೆ ಅನುದಾನವನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ನೂತನ ಕಾಲೇಜಿನ ಕಛೇರಿ ಮತ್ತು ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ ಡಿ.ಸಿ. ಬಿಲ್ಲಿನ ಮೂಲಕ ಡ್ರಾ ಮಾಡಿ ಪಾವತಿಗೆ ಕ್ರಮವಹಿಸಲು ಸೂಚಿಸಿದೆ.
8. ಕೇಂದ್ರ ಕಛೇರಿಯಿಂದ ಬಿಡುಗಡೆಯಾದ ಅನುದಾನದಲ್ಲಿ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಮಯದಲ್ಲಿ Sec 51(1) of the KGST Act 2017 and Central GST Act 2017 ಪ್ರಕಾರ ನಿಯಮಗಳಲ್ಲಿ ಅವಕಾಶವಿದ್ದಲ್ಲಿ GST & CGST ಕಟಾಯಿಸಲು ಸೂಚಿಸಿದೆ.
9. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಬಳಸಿಕೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.

<u>(ಟಿಪ್ಪಣಿ ಇ-ಆಫೀಸ್ ಮುಖಾಂತರ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)</u>

ಕಾಲೇಜು ಶಿಕ್ಷಣ ನಿರ್ದೇಶಕರು

<u>ಇವರಿಗೆ:</u>

1. ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ.
2. ಮ್ಯಾನೇಜರ್, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಅನುಬಂಧ-1

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ:2202-03-103-2-01-(041) 'ಇತರೆ ಸರ್ಕಾರಿ ಕಾಲೇಜುಗಳು' ಅಡಿಯಲ್ಲಿ ಪ್ರಯಾಣ ಭತ್ಯೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರಣಾ ಪಟ್ಟಿ

ಆದೇಶ ಸಂಖ್ಯೆ:ಕಾಶಿಇ:03:ಯೋಜನೆ:ಅ.ಬಿ:2020-21, ದಿನಾಂಕ:18.03.2021

| ಕ್ರ. ಸಂ. | ಪ್ರಾದೇಶಿಕ ಕಛೇರಿ | ಬಿಡುಗಡೆ ಮಾಡಿರುವ ಮೊತ್ತ ರೂ.ಗಳಲ್ಲಿ |
|---|---|---|
| 1 | ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು | 8000 |
| 2 | ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು | 5000 |
| 3 | ಪ್ರಾದೇಶಿಕ ಜಂಟಿ ನಿರ್ದೇಶಕರು,ಮಂಗಳೂರು | 8000 |
| 4 | ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ | 10000 |
| 5 | ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ | 4000 |
| | ಒಟ್ಟು | **35000** |

(ಒಟ್ಟು ಮೂವತ್ತೈದು ಸಾವಿರ ರೂ.ಗಳು)

ಕಾಲೇಜು ಶಿಕ್ಷಣ ನಿರ್ದೇಶಕರು

ಅನುಬಂಧ-2

2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ:2202-03-103-2-01-(052) 'ಇತರೆ ಸರ್ಕಾರಿ ಕಾಲೇಜುಗಳು' ಅಡಿಯಲ್ಲಿ ದೂರವಾಣಿ ವೆಚ್ಚಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದ ವಿವರಣಾ ಪಟ್ಟಿ

ಆದೇಶ ಸಂಖ್ಯೆ:ಕಾಶಿಇ:03:ಯೋಜನೆ:ಅ.ಬಿ:2020-21, ದಿನಾಂಕ:18.03.2021

| ಕ್ರ. ಸಂ. | ಕಾಲೇಜಿನ ಹೆಸರು | ಬಿಡುಗಡೆ ಮಾಡಿರುವ ಮೊತ್ತ ರೂ.ಗಳಲ್ಲಿ |
|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ | 5000 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾರೋಹಳ್ಳಿ | 5000 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಲಗೂರು | 5000 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ | 10000 |
| 5 | ಸರ್ಕಾರಿ ಕಾನೂನು ಕಾಲೇಜು, ಹಾಸನ | 5000 |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಾಪಟ್ಟಣ | 5000 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ | 5000 |
| 8 | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು | 5000 |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಡಿಪು | 5000 |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುತ್ತೂರು | 10000 |
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಂಪುರ, ಬಾಗಲಕೋಟೆ | 5000 |
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಲೇಪೇಟೆ | 5000 |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಕೆ.ಕೊಪ್ಪ | 5000 |
| 14 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್ಲ | 5000 |
| 15 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮರಿಯಮ್ಮನಹಳ್ಳಿ | 5000 |
| 16 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಕಟನೂರು | 5000 |
| | ಒಟ್ಟು | **90000** |

(ಒಟ್ಟು ತೊಂಭತ್ತು ಸಾವಿರ ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು